# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ 2020-21ನೇ ಸಾಲಿನ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಇವರ ಪತ್ರ ಸಂಖ್ಯೆ: ಕಗ್ಯಾಇ/ಇಎಸ್‌ಟಿ-1/04/2020-21, ದಿನಾಂಕ: 08.07.2020.

ಪ್ರಸ್ತಾವನೆ: -

ಮೇಲೆ ಓದಲಾದ ಪತ್ರದಲ್ಲಿ ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಇವರು 2020-21ನೇ ಸಾಲಿನ ಕಾರ್ಯಕ್ರಮಕ್ಕಾಗಿ ಲೆಕ್ಕಶೀರ್ಷಿಕೆ: 3454-02-110-0-01-059 ಇತರೆ ಖರ್ಚುಗಳಡಿ ಇಲಾಖೆಗೆ ಒಟ್ಟು ರೂ.30.00ಲಕ್ಷ ಅನುದಾನ ಹಂಚಿಕೆಯಾಗಿದ್ದು, 2020-21ನೇ ಸಾಲಿನ ಮುಂದುವರೆದ ಕಾರ್ಯಕ್ರಮಗಳಿಗೆ ಹಾಗೂ ಹೊಸ ಕಾರ್ಯಕ್ರಮಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

714

A8/2020 **ಸರ್ಕಾರದ ಆದೇಶ ಸಂಖ್ಯೆ: ಕಸಂವಾ 13 ಕರಾಗೆ ಆಕ 2020 ಬೆಂಗಳೂರು, ದಿನಾಂಕ: 03.08.2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಕಾರ್ಯಕ್ರಮಗಳು/ಯೋಜನೆಗಳ ಅನುಷ್ಠಾನಕ್ಕಾಗಿ 2020-21ನೇ ಸಾಲಿನ ಆಯವ್ಯಯದಲ್ಲಿ ರೂ.30.00 ಲಕ್ಷ (ಮೂವತ್ತು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ನಿಗದಿಪಡಿಸಿದ್ದು, ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನಕ್ಕನುಗುಣವಾಗಿ ಅನುಬಂಧದಲ್ಲಿ ಲಗತ್ತಿಸಿರುವಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

## ಷರತ್ತುಗಳು

1. 2020-21 ನೇ ಸಾಲಿನಲ್ಲಿ ಅನುಮೋದನೆಯಾದ ಹೊಸದಾಗಿ ಮಂಜೂರಾದ ಯೋಜನಾ ಕಾರ್ಯಕ್ರಮಗಳನ್ನು ಹಾಗೂ ಮುಂದುವರೆದ ಯೋಜನಾ ಕಾರ್ಯಕ್ರಮಗಳನ್ನು ಮಾತ್ರ ಮುಂದುವರೆಸಬೇಕು.
2. ಮುಂದುವರೆದ ಯೋಜನಾ ಕಾರ್ಯಕ್ರಮಗಳಲ್ಲಿ ಯಾವುದೇ ಹೊಸ ಘಟಕಗಳು ಅಥವಾ ಹೊಸ ಯೋಜನೆಗಳು ಒಳಗೊಂಡಿದ್ದಲ್ಲಿ ಅವುಗಳಿಗೆ ಪ್ರತ್ಯೇಕವಾದ ಪ್ರಸ್ತಾವನೆಗಳನ್ನು ಸಲ್ಲಿಸಿ ನಿಯಮಾನುಸಾರ ಮಂಜೂರಾತಿ ಪಡೆಯಬೇಕು.
3. ಹೊಸ ಸಂಸ್ಥೆಗಳಿಗೆ ಅಥವಾ ಅದೇ ಯೋಜನೆಯ ಹೊಸ ಪ್ರಕರಣಗಳಲ್ಲಿ ಒಳಗೊಂಡಿರುವ ಕೆಲಸಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಸಾಲ ಬಂಡವಾಳ ವೆಚ್ಚ ಸಹಾಯಧನ/ಸೋಡಿ ಮುಂತಾದವುಗಳ ಮಂಜೂರಾತಿ ಇವು ಆಯಾಯ ಬಾಬ್ತುಗಳಿಗೆ ಸಂಬಂಧಿಸಿದ ಪ್ರತ್ಯಾಯೋಜಿತ ಅಧಿಕಾರಗಳ ಪರಿಮಿತಿಯಲ್ಲಿರಬೇಕು.
4. ಆರ್ಥಿಕ ಇಲಾಖೆಯ ಮಿತವ್ಯಯ ಆದೇಶಗಳಿಗೆ ಒಳಪಡುವ ಸಿಬ್ಬಂದಿ ಸೃಜನೆ, ವಾಹನ ಮತ್ತು ಯಂತ್ರ ಸಾಮಗ್ರಿ ಖರೀದಿ, ಹೊಸ ಕಛೇರಿ ತೆರೆಯುವುದು, ಹೊಸ ಯೋಜನೆಗಳಿಗೆ ಮಂಜೂರಾತಿ, ಇವುಗಳಿಗೆ ಪ್ರತ್ಯೇಕವಾಗಿ ಆರ್ಥಿಕ ಇಲಾಖೆಯ ಹಾಗೂ ಯೋಜನಾ ಇಲಾಖೆಯ ಅನುಮೋದನೆಯನ್ನು ಪಡೆಯಲು ಪ್ರಸ್ತಾವನೆಗಳನ್ನು ಸಲ್ಲಿಸುವುದು.
5. ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರರಾದ ಅಧಿಕಾರಿಗಳು ಅವರಿಗೆ ನೀಡಲಾದ ಆರ್ಥಿಕ ಅಧಿಕಾರಕ್ಕೆ ಒಳಪಟ್ಟು ಯೋಜನಾ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದು.
6. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 91 ವೆಚ್ಚ-7/2020, ದಿನಾಂಕ: 30.05.2020ರಂತೆ 2020-21ನೇ ಸಾಲಿನ ಆಯವ್ಯಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಯೋಜನೆಗಳಿಗೆ ಎದುರಾಗಿ ಒದಗಿಸಿರುವ ಅನುದಾನವನ್ನು ಸರ್ಕಾರದಿಂದ ಪ್ರತ್ಯಾಯೋಜಿಸಿ ಮಾಡಿರುವ ಯೋಜನೆಗಳ ಎದುರಾಗಿ ನವೆಂಬರ್ 2020ರವರೆಗೆ ಪರಿಷ್ಕೃತ ಅಂದಾಜಿನ ಅರ್ಧದಷ್ಟು ಮೊತ್ತವನ್ನು ಮಾತ್ರ ಬಳಸಿಕೊಳ್ಳತಕ್ಕದ್ದು.

7. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 91 ವೆಚ್ಚ-7/2020, ದಿನಾಂಕ: 30.05.2020ರಂತೆ ವೇತನಕ್ಕೆ ಸಂಬಂಧಿಸಿದಂತೆ ಏಪ್ರಿಲ್, ಮೇ ತಿಂಗಳಿಗೆ ಬಿಡುಗಡೆ ಮಾಡಿರುವುದೂ ಸೇರಿದಂತೆ ಆಯವ್ಯಯದ 8/12 ಭಾಗದಷ್ಟು ಮೊತ್ತವನ್ನು ಮಾತ್ರ ಬಿಡುಗಡೆ ಮಾಡಬಹುದಾಗಿದೆ. ಇದರಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿರುವ ಮೊತ್ತವನ್ನು ಹೊರತುಪಡಿಸಿ ಉಳಿದಿರುವ ಮೊತ್ತವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಬಹುದಾಗಿದೆ. ಈ ಸೂಚನೆ ಹೆಚ್.ಆರ್.ಎಂ.ಎಸ್. ನಿಂದ ಹೊರಗೆ ವೇತನ ಸೆಳೆಯುವ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಹೆಚ್.ಆರ್.ಎಂ.ಎಸ್. ಹೊರಗೆ ವೇತನ ಸೆಳೆಯುತ್ತಿರುವ ಸಹಾಯನುದಾನ ಸಂಸ್ಥೆಗಳಿಗೆ ಆಯವ್ಯಯವನ್ನು ಪರಿಷ್ಕರಿಸಿರುವುದರಿಂದ ಪರಿಷ್ಕೃತ ಆಯವ್ಯಯದಲ್ಲಿ ನವೆಂಬರ್ ತಿಂಗಳುವರೆಗೆ ಪ್ರತಿ ತಿಂಗಳು 1/12ರಂತೆ ಬಿಡುಗಡೆ ಮಾಡುವುದು.
8. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 91 ವೆಚ್ಚ-7/2020, ದಿನಾಂಕ: 30.05.2020ರಂತೆ ಯಾವುದೇ ಹೊಸ ಯೋಜನೆ/ಕಾರ್ಯಕ್ರಮ/ ಕಾಮಗಾರಿ ಕೈಗೊಳ್ಳುವ ಮುನ್ನ ಆರ್ಥಿಕ ಇಲಾಖೆಯ ಸಹಮತಿಯನ್ನು ಕಡ್ಡಾಯವಾಗಿ ಪಡೆಯಬೇಕೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.
9. 1999ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಹಾಗೂ ಅದರ ನಿಯಮಗಳು 2000 ವನ್ನು ಕಡ್ಡಾಯವಾಗಿ ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2020, ದಿನಾಂಕ: 30.05.2020 ಮತ್ತು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ ವೆಚ್ಚ-7/2020, ದಿನಾಂಕ: 30.05.2020 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಕೆ. ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ).

**ಇವರಿಗೆ :**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ), (ಇ&ಎಸ್‌ಎಸ್‌ಎ), (ಎ&ಇ) ಕರ್ನಾಟಕ, ಬೆಂಗಳೂರು-560001.
2) ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕಾವೇರಿ ಭವನ, ಬೆಂಗಳೂರು.
3) ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ. ಗೋಪುರ, ಬೆಂಗಳೂರು.
4) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.
5) ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಮತ್ತು ಯುವ ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6) ಸರ್ಕಾರದ ಕಾರ್ಯದರ್ಶಿಯವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8) ನಿರ್ದೇಶಕರು ಜನಶಕ್ತಿ ಮತ್ತು ಉದ್ಯೋಗ ವಿಭಾಗ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7), ವಿಧಾನ ಸೌಧ, ಬೆಂಗಳೂರು.
10) ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 13 ಕರಾಗೆ ಆಕ 2020, ದಿನಾಂಕ: 03.08.2020ಕ್ಕೆ ಅನುಬಂಧ-1

## ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕರಣೆ ಯೋಜನೆಯಡಿ 2020-21ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು

(ಲೆಕ್ಕ ಶೀರ್ಷಿಕೆ-3454-02-110-0-01-059ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕರಣೆ)

2020-21ನೇ ಸಾಲಿಗೆ ಮುಂದುವರೆದ ಕಾರ್ಯಕ್ರಮಗಳು

(ರೂ. ಲಕ್ಷಗಳಲ್ಲಿ)

| | ಜಿಲ್ಲಾ ಗ್ಯಾಸೆಟಿಯರ್ ಪ್ರಕಟಣೆ | 2020-21ನೇ ಸಾಲಿನ ಆಯವ್ಯಯ |
|---|---|---|
| 1) | ಬೆಂಗಳೂರು ಜಿಲ್ಲಾ ಗ್ಯಾಸೆಟಿಯರ್‌ನ 3ನೇ ಸಲಹಾ ಸಮಿತಿ ಸಭೆ, ಲೇಖಕರ ಸಂಭಾವನೆ, ಪುಟವಿನ್ಯಾಸ ಹಾಗೂ ಮುದ್ರಣ. | 9.00 |
| 2) | ಬಾಗಲಕೋಟೆ ಜಿಲ್ಲಾ ಗ್ಯಾಸೆಟಿಯರ್‌ನ 2ನೇ ಸಲಹಾ ಸಮಿತಿ ಸಭೆ, ಲೇಖಕರ ಸಂಭಾವನೆ ಪಾವತಿ. | 4.00 |
| | **ಜಿಲ್ಲಾ ಗ್ಯಾಸೆಟಿಯರ್ ಪ್ರಕಟಣೆ** | |
| 3) | 1) **ದಾವಣಗೆರೆ ಜಿಲ್ಲೆಯ:** ಚನ್ನಗಿರಿ, ಹೊನ್ನಾಳಿ ಮತ್ತು ಜಗಳೂರು ತಾಲ್ಲೂಕು ಗ್ಯಾಸೆಟಿಯರ್‌ಗಳ ಸಲಹಾ ಸಮಿತಿ ಸಭೆ, ಲೇಖಕರ ಸಂಭಾವನೆ ಮತ್ತು ಮುದ್ರಣ.<br>2) **ಕೊಪ್ಪಳ ಜಿಲ್ಲೆಯ:** ಕೊಪ್ಪಳ, ಯಲಬುರ್ಗ, ಗಂಗಾವತಿ ಮತ್ತು ಕುಷ್ಟಗಿ ತಾಲ್ಲೂಕು ಗ್ಯಾಸೆಟಿಯರ್‌ಗಳ ಸಲಹಾ ಸಮಿತಿ ಸಭೆ, ಲೇಖಕರ ಸಂಭಾವನೆ ಮತ್ತು ಮುದ್ರಣ. | 9.50 |
| 4) | ರಾಮನಗರ ಜಿಲ್ಲಾ ಗ್ಯಾಸೆಟಿಯರ್ ರಚನೆ | - |
| | **ಒಟ್ಟು** | **22.50** |

(ಹೆಚ್.ಕೆ. ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ).

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 13 ಕರಾಗೆ ಆಕ 2020, ದಿನಾಂಕ: 03.08.2020ಕ್ಕೆ ಅನುಬಂಧ-2

(ಲೆಕ್ಕ ಶೀರ್ಷಿಕೆ-3454-02-110-0-01-059ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕರಣೆ)
2020-21ನೇ ಸಾಲಿನಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿದ ಕಾರ್ಯಕ್ರಮಗಳು

(ರೂ. ಲಕ್ಷಗಳಲ್ಲಿ)

| | ಜಿಲ್ಲಾ ಗ್ಯಾಸೆಟಿಯರ್ ಪ್ರಕಟಣೆ | 2020-21ನೇ ಸಾಲಿನ ಆಯವ್ಯಯ |
|---|---|---|
| | **ಚಿಕ್ಕಬಳ್ಳಾಪುರ ಜಿಲ್ಲಾ ಗ್ಯಾಸೆಟಿಯರ್ ಅಧ್ಯಾಯಗಳ ರಚನೆ** | |
| 1) | ಗ್ಯಾಸೆಟಿಯರ್ ಅಧ್ಯಾಯನಗಳನ್ನು ರಚನೆಗೆ ಹೊರಗುತ್ತಿಗೆ ವಿದ್ವಾಂಸರಿಗೆ ನೀಡುವುದು. ಲೇಖಕರ ಸಂಭಾವನೆಯನ್ನು ಅಧ್ಯಾಯನಗಳ ಸಲಹಾ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ನಂತರ ಪಾವತಿಸಲಾಗುವುದು. | - |
| | **ಬೆಂಗಳೂರು ಗ್ರಾಮಾಂತರ ಜಿಲ್ಲಾ ಗ್ಯಾಸೆಟಿಯರ್ ಅಧ್ಯಾಯಗಳ ರಚನೆ** | |
| 2) | ಗ್ಯಾಸೆಟಿಯರ್ ಅಧ್ಯಾಯನಗಳನ್ನು ರಚನೆಗೆ ಹೊರಗುತ್ತಿಗೆ ವಿದ್ವಾಂಸರಿಗೆ ನೀಡುವುದು. ಲೇಖಕರ ಸಂಭಾವನೆಯನ್ನು ಅಧ್ಯಾಯನಗಳ ಸಲಹಾ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ನಂತರ ಪಾವತಿಸಲಾಗುವುದು. | - |
| | **ವಿಶೇಷ ಸಂಪುಟ** | |
| 3) | ಕರ್ನಾಟಕ ಕೈಪಿಡಿ ಸಂಪುಟ ಪರಿಷ್ಕರಣೆ. | 7.50 |
| | ಒಟ್ಟು | **7.50** |

(ಹೆಚ್.ಕೆ. ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ).